ಕ್ರಾಂತಿಯಕಿಡಿ

ಕಾಯಕಯೋಗಿ

KAYAKAYOGI-MORNING DAILY ಕನ್ನಡ ದಿನಪತ್ರಿಕೆ

ಪುಟ-04
ಭಾನುವಾರ
04 ಜುಲೈ 2021

ಪಾಂಡವಪುರ ಪಟ್ಟಣದ ಮುಖ್ಯರಸ್ತೆಯಲ್ಲಿ ಚರಂಡಿ ಕಟ್ಟಿಕೊಂಡು ಸಮಸ್ಯೆ ಎದುರಾದ ಹಿನ್ನೆಲೆಯಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಮಹಿಳಾ ಮುನ್ನಡೆ ಕಾರ್ಯಕರ್ತರು ಅತ್ಯಾಚಾರ ಹಾಗೂ ಅಪರಾಧಗಳಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ಆರೋಗ್ಯದಿಂದಿರಿ-ಸುರಕ್ಷಿತವಾಗಿರಿ, ನಾವೆಲ್ಲೂರು ಒಟ್ಟಾಗಿ ಕೊರೋನಾ ವಿರುದ್ಧ ಹೋರಾಡೋಣ.

ಕಾಯಕಯೋಗಿ ಮಾಸ್ಕ್ ಅಭಿಯಾನ

ಇಡೀ ವಿಶ್ವವನ್ನೇ ಬೆಚ್ಚಿಬೀಳಿಸಿರುವ ಮಹಾಮಾರಿ ಕೊರೋನಾ ತಡೆಗಟ್ಟುವುದು ಇಂದಿನ ಜರೂರು ಪರಿಸ್ಥಿತಿ. ಪ್ರತಿಯೊಬ್ಬರು ಕಡ್ಡಾಯವಾಗಿ ಮಾಸ್ಕ್ ಧರಿಸಿ ಸೆಲ್ಫಿ ಕಳಿಸಿ ಮಾಸ್ಕ್ ತೊಟ್ಟ ನಿಮ್ಮ ಭಾವಚಿತ್ರವನ್ನು ಕಾಯಕಯೋಗಿ ಪ್ರಕಟಿಸಲಿದೆ.
ಬಿ.ಕೆ.ಅರುಣಜ್ಯೋತಿ, ಸಂಪಾದಕಿ ಕಾಯಕಯೋಗಿ ದಿನಪತ್ರಿಕೆ, ಮಂಡ್ಯ, ಮೊ:9980605484

ಸರ್ಕಾರದ ನಿಯಮಾವಳಿ ಪಾಲಿಸೋಣ ಮಹಾಮಾರಿ ಕರೋನಾ ಓಡಿಸೋಣ

ಕಾಯಕಯೋಗಿ ಕಾಳಜಿ

ಪರಿಸರ ಸಂರಕ್ಷಣೆ ಸರ್ವರ ಹೊಣೆ

ಸಸಿ ನೆಡೋಣ-ಕರೋನಾ ಓಡಿಸೋಣ

ಇಡೀ ವಿಶ್ವವನ್ನೇ ತಲ್ಲಣಗೊಳಿಸಿರುವ ಮಹಾಮಾರಿ ಕರೋನಾ ಸೋಂಕಿನಿಂದ ಪ್ರತಿನಿತ್ಯ ಸಾವಿರಾರು ಸಾವು-ನೋವುಗಳು ಸಂಭವಿಸುತ್ತಿವೆ. ಸ್ವಾರ್ಥಕ್ಕಾಗಿ ಪರಿಸರ ನಾಶ ಮಾಡಿದ ಪರಿಣಾಮ ಆಕ್ಸಿಜನ್ ಕೊರತೆ ಮನುಷ್ಯನನ್ನು ಉಸಿರುಗಟ್ಟಿ ಸಾಯುವಂತೆ ಮಾಡಿದೆ. ಇಂತಹ ಸಂಕಷ್ಟದಿಂದ ಪಾರಗಲು ನಾಳಿನ ಭವಿಷ್ಯಕ್ಕೆ ಇಂದೇ ಸಸಿಯೊಂದನ್ನು ನೆಟ್ಟು ಮತ್ತೆ ಪ್ರಕೃತಿಯ ಮಡಿಲನ್ನು ಮತ್ತಷ್ಟು ಗಟ್ಟಿಗೊಳಿಸೋಣ. ಪ್ರತಿಯೊಬ್ಬರೂ ತಮ್ಮ ಮನೆಯಂಗಳ, ಗದ್ದೆ, ಹೊಲ, ಸರ್ಕಾರಿ ಜಾಗ, ಶಾಲಾ ಆವರಣ, ಗೋಮಾಳದಲ್ಲಿ ಸಸಿಗಳನ್ನು ನೆಟ್ಟು ಸಸ್ಯಸಂಕುಲದ ಸಮೃದ್ದಿಗೆ ಮುಂದಾಗೋಣ.
ನೀವು ಸಸಿನೆಟ್ಟ ಪೋಟೋ ನಮಗೆ ವಾಟ್ಸ್‌ಪ್ ಮಾಡಿ. ಮೊ : 9343230788.

ವನ್ಯಜೀವಿ ಹತ್ಯೆ ಆರೋಪಿಗಳ ಬಂಧನ

ಮದ್ದೂರು : ಅರಣ್ಯ ಪ್ರದೇಶದಲ್ಲಿ ವನ್ಯ ಜೀವಿಗಳನ್ನು ಹತ್ಯೆ ಮಾಡಲು ಮುಂದಾಗಿದ್ದ ಇಬ್ಬರು ಆರೋಪಿಗಳು ಮತ್ತು ಹತ್ಯೆಗೆ ಬಳಸಲು ಮುಂದಾಗಿದ್ದ ಸಿಡಿಮದ್ದು ಹಾಗೂ ದ್ವಿಚಕ್ರ ವಾಹನವನ್ನು ತಾಲೂಕಿನ ಮಲ್ಲನಾಯಕನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಬೆಳಿಗ್ಗೆ ಜರುಗಿದೆ. ಮದ್ದೂರು ತಾಲೂಕಿನ ಕೊಪ್ಪ ಹೋಬಳಿಯ ಉಪಾರದೊಡ್ಡಿ ಕೊಪ್ಪಲು ಗ್ರಾಮದ ಚಿಕ್ಕಣ್ಣ(35) ಹಾಗೂ ಮಂಜುನಾಥ್(18) ಎಂಬ ಇಬ್ಬರು ಆರೋಪಿಗಳನ್ನು ಮದ್ದೂರು ಪ್ರಾದೇಶಿಕ ವಲಯದ ಅಧಿಕಾರಿಗಳು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಮನೆ ಭಸ್ಮ : ಸಂಸದೆ ಸಾಂತ್ವಾನ

ಪಾಂಡವಪುರ : ತಾಲೂಕಿನ ಲಕ್ಷ್ಮೀಸಾಗರ ಗ್ರಾಮದಲ್ಲಿ ವಿದ್ಯುತ್ ಶಾರ್ಟ್‌ಸರ್ಕ್ಯೂಟ್‌ನಿಂದ ಮನೆಯೊಂದು ಸಂಪೂರ್ಣ ಬೆಂಕಿಗಾಹುತಿಯಾಗಿ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಶನಿವಾರ ಭೇಟಿ ನೀಡಿದ ಸಂಸದೆ ಸುಮಲತಾ ಅಂಬರೀಶ್ ಅವರು ಸಂತ್ರಸ್ಥರಿಗೆ ಸಾಂತ್ವನ ಹೇಳಿ ಸರ್ಕಾರದಿಂದ ಸಿಗುವ ಪರಿಹಾರವನ್ನು ಒದಗಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಗ್ರಾಮಕ್ಕೆ ಭೇಟಿ ನೀಡಿದ ಅವರು ಬೆಂಕಿಗಾಹುತಿಯಾದ ಮನೆ ವೀಕ್ಷಣೆ ಮಾಡಿದ ನಂತರ ಘಟನೆ ಕುರಿತಂತೆ ತಹಸೀಲ್ದಾರ್, ಸೆಸ್ಕ್ ಎಇಇ, ಗ್ರಾಮ ಪಂಚಾಯಿತಿ ಪಿಡಿಒ ಹಾಗೂ ಸಂತ್ರಸ್ಥರಿಂದ ಸಂಪೂರ್ಣ ಮಾಹಿತಿ ಪಡೆದುಕೊಂಡು ನಂತರ ಮಾತನಾಡಿದರು.

ಮನೆ ಕಳೆದುಕೊಂಡ ಸಂತ್ರಸ್ಥ ಕುಟುಂಬಕ್ಕೆ ಸರ್ಕಾರದಿಂದ ಬರಬಹುದಾದ ಎಲ್ಲಾ ಮೂಲಗಳಿಂದ ಪರಿಹಾರ ಕೊಡಿಸಲು ಹಾಗೂ ಮನೆ ಮರು ನಿರ್ಮಾಣಕ್ಕೆ ಅನುದಾನ ಒದಗಿಸಲು ಪ್ರಾಮಾಣಿಕವಾಗಿ ಪ್ರಯತ್ನ ನಡೆಸುತ್ತೇನೆ. ಜತೆಗೆ ಮನೆ ಕಳೆದುಕೊಂಡವರ ಇಬ್ಬರು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ನೆರವು ನೀಡಲಾಗುವುದು. ಘಟನೆಗೆ ಸೆಸ್ಕ್ ಇಲಾಖೆಯೇ ಹೊಣೆಗಾರಿಕೆ ಹೊರಬೇಕಾಗುತ್ತದೆ. ಈ ಕುರಿತಂತೆ ಮಂಡ್ಯದಲ್ಲಿ ದಿಶಾ ಸಮಿತಿ ಸಭೆಯಲ್ಲಿ ಚರ್ಚೆ ನಡೆಸಿ ಶೀಘ್ರ ಕ್ರಮ ವಹಿಸುತ್ತೇನೆ. ಈಗಾಗಲೇ ಪಂಚಾಯತ್‌ರಾಜ್ ಇಲಾಖೆ ಅಧಿಕಾರಿಗಳು ಸಂಭವಿಸಿರುವ ನಷ್ಟ 10 ಲಕ್ಷ ರೂ. ಹಾಗೂ ಮನೆ ನಿರ್ಮಾಣಕ್ಕೆ 13.5 ಲಕ್ಷ ಸೇರಿದಂತೆ 23.5 ಲಕ್ಷ ರೂ. ಅಂದಾಜು ಮೊತ್ತದ ವರದಿಯನ್ನು ಸೆಸ್ಕ್ ಇಲಾಖೆಗೆ ಸಲ್ಲಿಸಿದ್ದಾರೆ. ಈ ಮೊತ್ತ ಶೀಘ್ರ ಬಿಡುಗಡೆಗೊಳಿಸಲು ಕ್ರಮ ವಹಿಸುವುದಾಗಿ ತಿಳಿಸಿದರು.

ಸಂಸದರಿಗೆ ಸಮಸ್ಯೆಗಳ ದೂರು ಸಲ್ಲಿಕೆ : ಸಂಸದರಿಗೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಹಲವು ದೂರುಗಳು ಸಲ್ಲಿಕೆಯಾದವು. ಇದೇ ವೇಳೆ ತಾಲೂಕಿನ ಗಿಡದಶಂಭೂನಹಳ್ಳಿ ಸಮೀಪ ಆನಂದ್ ಎಂಬುವವರು ಅರಣ್ಯ ಪ್ರದೇಶದಲ್ಲಿ ನಿರಂತರ ಗಣಿಗಾರಿಕೆ ನಡೆಯುತ್ತಿದ್ದು, ಸ್ಫೋಟದ ರಭಸಕ್ಕೆ ಗಣಿಗಾರಿಕೆ ಸುತ್ತಲಿನ ಪ್ರದೇಶದ ಗ್ರಾಮದ ಮನೆಗಳು ಬಿರುಕು ಬಿಟ್ಟಿವೆ. ಜತೆಗೆ ಜಾನುವಾರಗಳನ್ನು ಮೇಯಿಸಲು ಸಾಧ್ಯವಾಗುತ್ತಿಲ್ಲ. ಹತ್ತು ಹಲವು ಬಾರಿ ಹೋರಾಟ ನಡೆಸಿದರೂ ಅರಣ್ಯ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ ಎಂದು ಗ್ರಾಮಸ್ಥರು ಸಂಸದರಿಗೆ ದೂರು ಸಲ್ಲಿಸಿದರು.

ಇದಕ್ಕೆ ಉತ್ತರಿಸಿದ ಸಂಸದೆ ಸುಮಲತಾ ಅಂಬರೀಶ್ ಅವರು ಅಕ್ರಮ ಗಣಿಗಾರಿಕೆಗೆ ಅವಕಾಶ ನೀಡುವುದಿಲ್ಲ. ತಕ್ಷಣ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮಕ್ಕೆ ಸೂಚಿಸಲಾಗುವುದು ಎಂದರು.

ಈ ವೇಳೆ ತಹಸೀಲ್ದಾರ್ ಪ್ರಮೋದ್ ಎಲ್.ಪಾಟೀಲ್, ಸೆಸ್ಕ್ ಎಇಇ ವಿ.ಪುಟ್ಟಸ್ವಾಮಿ, ಸಂಸದರ ಸಂಬಂಧಿಕ ಮದನ್, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಎಲ್.ಸಿ.ಮಂಜುನಾಥ್, ಕಾಂಗ್ರೆಸ್ ಮುಖಂಡರಾದ ಎಂ.ಆರ್.ದೇವರಾಜು, ಅಮೃತಿ ಹಲಗೇಗೌಡ, ಕಣಿವೆ ರಾಮು, ಯುವ ಮುಖಂಡ ದೀಪು, ಕೃಷ್ಣೇಗೌಡ, ಜಯರಾಮು ಇದ್ದರು.

ಚಿತ್ರಮಂದಿರದ ಕಾರ್ಮಿಕರಿಗೆ ಪುಡ್‌ಕಿಟ್

ಮಂಡ್ಯ : ನಗರದ ಸಂಜಯ ಚಿತ್ರ ಮಂದಿರದ ಆವರಣದಲ್ಲಿ ಚಿತ್ರಮಂದಿರಗಳಲ್ಲಿ ಕೆಲಸ ಮಾಡುವ ಕಾರ್ಮಿಕರು/ ಸಿಬ್ಬಂದಿಗಳಿಗೆ ಬೆಂಗಳೂರಿನ ಧೀರಜ್ ಫಿಲಂಸ್ ಮಾಲೀಕರಾದ ಧೀರಜ್ ಹಾಗೂ ಎಸ್.ಪಿ.ಫಿಲಂಸ್ ಮಾಲೀಕರಾದ ಮೋಹನದಾಸ್ ಪೈ ಫುಡ್ ಕಿಟ್‌ಗಳನ್ನು ವಿತರಿಸಿದರು.

ಮಂಡ್ಯ ಜಿಲ್ಲೆಯ ಚಿತ್ರಮಂದಿರಗಳಲ್ಲಿ ಕೆಲಸ ಮಾಡುವ ಹಲವು ಮಂದಿಗೆ ಪುಡ್‌ಕಿಟ್‌ಗಳನ್ನು ಪಡೆದುಕೊಂಡು ಧೀರಜ್ ಹಾಗೂ ಮೋಹನ್‌ದಾಸ್ ಪೈ ಅವರ ಸೇವೆಯನ್ನು ಶ್ಲಾಘಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಎಪಿಎಂಸಿ ಮಾಜಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಎಂ.ಡಿ.ಜಯರಾಮ್ ರಾಜ್ಯಾದ್ಯಂತ ಸಂಕಷ್ಟದ ಪರಿಸ್ಥಿತಿಯಲ್ಲಿರುವ ಚಿತ್ರಮಂದಿರಗಳ ಕಾರ್ಮಿಕರಿಗೆ ಪುಡ್ ಕಿಟ್‌ಗಳನ್ನು ವಿತರಿಸಿ ಸಹಾಯ ಹಸ್ತ ಚಾಚಿರುವ ಧೀರಜ್ ಮತ್ತು ಮೋಹನ್ ದಾಸ್ ಪೈ ರವರ ನಿಸ್ವಾರ್ಥ ಸೇವೆ ಅಭಿನಂದನೀಯ ಎಂದರು.

ಸಂಜಯ ಚಿತ್ರಮಂದಿರದ ಮಾಲೀಕ ಹೆಚ್.ಸಿ.ಮಹೇಶ್ ಮಾಜಿ ನಗರಸಭಾ ಸದಸ್ಯರಾದ ಜಾರ್ಜ್ ಮೋಹನ್ ಇದ್ದರು.

ಬರಹಗಾರರ ಬಳಗದಿಂದ ಅಂತರ್ಜಾಲ ಕವಿಗೋಷ್ಠಿ

ಟಿವಿ ಹಾವಳಿಯಿಂದ ಸಂಸ್ಕೃತಿ ನಾಶ ಡಾ.ಭೇರ್ಯರಾಮ್‌ಕುಮಾರ್

ಮಂಡ್ಯ : ಕರೋನಾ ಸಂಕಷ್ಟದ ಪರಿಸ್ಥಿತಿಯಲ್ಲಿ ಕವಿಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಬರಹಗಾರರ ಬಳಗ ಮೈಸೂರು ಘಟಕದ ವತಿಯಿಂದ ಆಯೋಜಿಸಿದ ರಾಜ್ಯಮಟ್ಟದ ಅಂತರ್ಜಾಲ ಕವಿಗೋಷ್ಠಿ ಅರ್ಥಪೂರ್ಣವಾಗಿ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ಭೇರ್ಯಾ ರಾಮ್ ಕುಮಾರ್ ವಹಿಸಿದ್ದರು. ಕವಿಯತ್ರಿ ಜಿ.ಎನ್.ಸಿಂಚನ ಪ್ರಾರ್ಥನೆಯೊಂದಿಗೆ ಆರಂಭವಾದ ಕವಿಗೋಷ್ಠಿಯಲ್ಲಿ ರಾಜ್ಯಾಧ್ಯಕ್ಷ ಮಧುನಾಯ್ಕ ಲಂಬಾಣಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮೈಸೂರು ಜಿಲ್ಲಾ ಘಟಕ ಬೆಳೆದು ಬಂದ ರೀತಿ ಹಾಗೂ ಮುಂದೆ ನಡೆಯಬೇಕಾದ ಯೋಜನೆಗಳನ್ನು ಕುರಿತು ಸಂಕ್ಷಿಪ್ತವಾಗಿ ಮಾಹಿತಿ ಕೊಟ್ಟರು. ಪತ್ರಕರ್ತ ಎಂ.ಶಿವಕುಮಾರ್, ಖಂಡು ಬಂಜಾರ ಶುಭಕೋರಿದರು. ಕವಿಗೋಷ್ಠಿಯಲ್ಲಿ ಮಂಜುನಾಥ ಬಿಎಸ್, ಸುಮತಿ ಸುಬ್ರಮಣ್ಯ, ಚಂದ್ರು ಮೈಸೂರು, ಮಂಜುನಾಥ ಜನವಾಡ, ಸಿ ಎಚ್ ನಾಗೇಂದ್ರಪ್ಪ, ಶಾಂತ ರ ಬೈರಪ್ಪ ಗೋ, ಎಸ್ ಮಹದೇವಸ್ವಾಮಿ, ತೇಜ ನಾಯಕ ಎಸ್, ಸುಜಾತ ರವೀಶ್, ಸಿ.ಎನ್ ಭಾಗ್ಯ ಲಕ್ಷ್ಮಿ ನಾರಾಯಣ, ಎಸ್.ಎಲ್ ವರಲಕ್ಷ್ಮಿ ಮಂಜುನಾಥ್, ಸುಷ್ಮಾಗೌಡ, ಎಂ ಜಿ ಶಾಸ್ತ್ರಿ ಬೈಲುಕುಪ್ಪೆ, ಅರುಣಾರಾವ್, ಅಕ್ಷತಾ ಎಸ್,ರೇಖಾ ಸುದೇಶ್, ವೇದರಾಜ್ ಕೂರಗಲ್, ವಿಜಯಲಕ್ಷ್ಮಿ ಎಂ ಮೂಲಗೆ, ಕಾಳಿಹುಂಡಿ ಶಿವಕುಮಾರ್, ಹೇಮಾ ರಮೇಶ್ , ಇಂದುಮತಿ ಶ್ರೀನಿವಾಸ, ವಂದನಾ ಮುರಳಿ,ರಾಧಾ ಅನಿಲ್ ಕುಮಾರ್ ವೈ.ವಿ, ಸೌಮ್ಯ ಗುರುರಾಜ್, ಕಾರ್ತಿಕ ಆಚಾರ್ಯ. ಕೆ,ಪ್ರಣವ ಲೇಖಾ ಮೈಸೂರು, ರತ್ನ ಚಂದ್ರಶೇಖರ್ ದೀಪಶ್ರೀ ಎಸ್ ಕವಿಗಳು ಕವನ ವಾಚಿಸಿದರು.

ಅಧ್ಯಕ್ಷತೆ ವಹಿಸಿಕೊಂಡಿದ್ದ ಡಾ.ಭೇರ್ಯರಾಮ್‌ಕುಮಾರ್ ಎಲ್ಲಾ ಕವನಗಳನ್ನು ಸಹನೆಯಿಂದ ಕೇಳಿ ಅದಕ್ಕೆ ಅಲ್ಲಿಯೇ ವಿಮರ್ಶೆ ಮಾಡಿ ವಿಶ್ಲೇಷಿಸಿ ಎಲ್ಲ ಕವಿಮನಸ್ಸುಗಳಿಗು ಮನಮುಟ್ಟುವಂತೆ ವಿಮರ್ಶೆ ಮಾಡಿದರು. ಹಿಂದೆ ರಂಗಭೂಮಿ ನಾಟಕಗಳು, ಯಕ್ಷಗಾನ ಪ್ರಸಂಗಗಳು, ಜಾನಪದ ಗೀತೆಗಳು ,ಸಾಮಾಜಿಕ ಜಾಗೃತಿ ಮೂಡಿಸುತ್ತಿದ್ದವು. ಆದರೆ ಇತ್ತೀಚೆಗೆ ದೂರದರ್ಶನ ಚಾನಲ್‌ಗಳು ಧಾರವಾಹಿಗಳು ಹಾಗೂ ಮೊಬೈಲ್ ಇದರಿಂದ ಸಂಸ್ಕೃತಿ ವಿನಾಶದತ್ತ ಸಾಗುತ್ತಿದೆ ಎಂದು ವಿಷಾದಿಸಿದರು.

ಕವಿಗಳು ಸಾಮಾಜಿಕ ಜವಾಬ್ದಾರಿಯನ್ನು ಮೂಡಿಸಬೇಕೆಂದು ಅಧ್ಯಕ್ಷತೆಯನ್ನು ನುಡಿಯನ್ನು ಹೇಳುತ್ತಾ ಎಲ್ಲಾ ಕವಿಗಳು ಜನರ ಹೃದಯ ಮುಟ್ಟುವಂತೆ ಮನಸ್ಸಿಗೆ ತಟ್ಟುವಂತೆ ಕವನ ಬರೆಯಿರಿ ಆಗ ಮಾತ್ರ ನಿಮ್ಮ ಕಾವ್ಯರಚನೆ ಸಾರ್ಥಕವಾಗುತ್ತದೆ ಎಂದು ಸಲಹೆ ನೀಡಿದರು. ಕಾರ್ಯಕ್ರಮದ ಜವಾಬ್ದಾರಿಯನ್ನು ಹಾಗೂ ತಾಂತ್ರಿಕ ನಿರ್ವಹಣೆಯನ್ನು ಸುಹಾಸ್ ಎಂ.ಕನ್ನಾಯಕನಹಳ್ಳಿ ಜಿಲ್ಲಾ ಸಂಚಾಲಕರು ಬರಹಗಾರರ ಬಳಗ ಮೈಸೂರು ಘಟಕ ಇವರು ಉತ್ತಮ ಸಂಘಟನೆಯನ್ನು ಮಾಡಿ ಎಲ್ಲರ ಗಮನ ಸೆಳೆದರು ಹಾಗೂ ಕಾರ್ಯಕ್ರಮದ ನಿರೂಪಣೆ ಮಾಡಿದಂತಹ ನಿಖಿತ ಬಿ.ಎಸ್ ಇವರು ಅಚ್ಚುಕಟ್ಟಾಗಿ ನೆರವೇರಿಸಿಕೊಟ್ಟರು. ಸರ್ವರನ್ನು ಪ್ರೀತಿಪೂರ್ವಕವಾಗಿ ಪ್ರಾರ್ಥನ ನಾಯಕ್ ಇವರು ನೆರವೇರಿಸಿಕೊಟ್ಟರು. ವೇದಾಂತ ವಂದಿಸಿದರು.



ಮಂಡ್ಯ ಕೊರೊನಾ ಮೀಟರ್

ಕೊರೋನಾ ಸೋಂಕು : 64 – ಸಾವು : 06



ಮಂಡ್ಯ : ಜಿಲ್ಲೆಯ ವಿವಿಧ ತಾಲ್ಲೂಕುಗಳ 64 ಮಂದಿಗೆ ಶನಿವಾರ ಕೊರೋನಾ ಸೋಂಕು ದೃಢಪಟ್ಟಿದ್ದು, 6 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ರೋಗಿಗಳಿಗೆ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ.

ಮಂಡ್ಯ-28, ಮದ್ದೂರು-09, ಮಳವಳ್ಳಿ-12 ಪಾಂಡವಪುರ-08, ಶ್ರೀರಂಗಪಟ್ಟಣ-02, ಕೆ.ಆರ್.ಪೇಟೆ-00 ನಾಗಮಂಗಲ-04 ಮಂದಿಗೆ ಕೊರೋನಾ ಸೋಂಕು ಕಾಣಿಸಿಕೊಂಡಿದೆ. ಈ ದಿನ 193 ಮಂದಿ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ಜಿಲ್ಲೆಯಲ್ಲಿ 939 ಸಕ್ರಿಯ ಪ್ರಕರಣಗಳಿವೆ. ಸರ್ಕಾರಿ ಆಸ್ಪತ್ರೆಯಲ್ಲಿ 226, ಕೋವಿಡ್‌ಕೇರ್ ಸೆಂಟರ್‌ನಲ್ಲಿ 646, ಖಾಸಗಿ ಆಸ್ಪತ್ರೆಯಲ್ಲಿ 17 ಮನೆಯಲ್ಲಿ 50 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ.

1ನೇ ಪುಟದಿಂದ

ಪ್ಲಾಸ್ಟಿಕ್ ರಹಿತ ದಿನಾಚರಣೆ

ವಸ್ತುಗಳು ಭೂಮಿಗೆ ಸೇರಿ ರಾಸಾಯನಿಕ ಮಿಶ್ರಿತ ಭೂಮಿಯಿಂದ ಪಡೆದ ಆಹಾರ ಪದಾರ್ಥಗಳ ಸೇವನೆಯಿಂದ ಮನುಕುಲ ನಾಶವಾಗುವಂತಹ ದಿನಗಳು ಸಂಭವಿಸುತ್ತಾ ಬಂದಿವೆ. ಸಾಂಕ್ರಾಮಿಕ ರೋಗಗಳ ಉಲ್ಬಣಕ್ಕೆ ನಮ್ಮ ದಿನಚರಿಯ ಬದಲಾವಣೆಗಳು ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಗರ್ಭಿಣಿಯರು ಸೀಯರು ರೋಗ ರುಜಿನಕ್ಕೆ ಪ್ಲಾಸ್ಟಿಕ್‌ಮುಕ್ತ ದಿನವನ್ನು ಒಂದು ದಿನಕ್ಕೆ ಮಾತ್ರ ಸೀಮಿತವಾಗದೆ ಪ್ರತಿ ದಿನವೂ ಆಚರಣೆಗೆ ತರಬೇಕೆಂದು ಸಲಹೆ ನೀಡಿದರು.

ಪರಿಸರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಅಧ್ಯಕ್ಷ ಮಂಗಲ ಯೋಗೀಶ್ ಮಾತನಾಡಿ, 2025ರ ವೇಳೆಗೆ ಅತಿ ಹೆಚ್ಚು ಕ್ಯಾನ್ಸರ್ ಪೀಡಿತ ರೋಗಿಗಳನ್ನು ಮಂಡ್ಯ ಜಿಲ್ಲೆಯಲ್ಲಿ ಅತಿ ಹೆಚ್ಚಾಗಿ ಕಾಣಬಹುದಾಗಿದೆ. ಮಹಿಳೆಯರಲ್ಲಿ ಅತಿ ಹೆಚ್ಚು ಕ್ಯಾನ್ಸರ್ ರೋಗಿಗಳು ಹೆಚ್ಚುತ್ತಿದ್ದಾರೆ. ಇದು ವಿಷಾದನೀಯ. ಬೇರೆ ಬೇರೆ ಸ್ತರದ ಕ್ಯಾನ್ಸರ್ ರೋಗಗಳು ಪ್ಲಾಸ್ಟಿಕ್ ಬಳಕೆಯ ಆಹಾರ ಸೇವನೆಯಿಂದ ಹೆಚ್ಚಾಗುತ್ತದೆ. ಎಂದು ತಿಳಿದುಬಂದಿದೆ. ಬಾಣಂತಿಯರು, ಗರ್ಭಿಣಿಯರು ಈ ವಿಷಯದಲ್ಲಿ ವಿಶೇಷ ಆಸಕ್ತಿ ವಹಿಸಿ ದೈನಂದಿನ ಜೀವನದಲ್ಲಿ ಪ್ಲಾಸ್ಟಿಕ್ ನಿರ್ಮೂಲನೆಗೆ ಅಗತ್ಯ ಬೆಂಬಲ ನೀಡಿ ಕುಟುಂಬಕ್ಕೆ ನೆರವಾಗಬೇಕೆಂದರು.

ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಸಹಾಯಕ ಪ್ರಬಂಧಕ ಪ್ರಕಾಶ್‌ಭಟ್, ಅನಂತರಾಂ ಮತ್ತಿತರ ಅಧಿಕಾರಿ ವೃಂದ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಪ್ಲಾಸ್ಟಿಕ್ ರಹಿತ ದಿನದ ಅಂಗವಾಗಿ ಬಟ್ಟೆ ಬ್ಯಾಗ್ ಹಾಗೂ ಸಸಿ ವಿತರಣೆ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ಗ್ರಾಮೀಣ ಬ್ಯಾಂಕ್ ವತಿಯಿಂದ ಮಮತೆಯ ಮಡಿಲುವಿಗೆ ಗ್ರೈಂಡರ್ ವಿತರಿಸಿದರು.

ಸ್ವಚ್ಛತೆಗೆ ಆದ್ಯತೆ : ಸಿಎಸ್ಪಿ ತಾಕೀತು

ಪಾಂಡವಪುರ : ಪಟ್ಟಣದ ಚರಂಡಿಗಳಲ್ಲಿ ನೀರು ಕಟ್ಟಿಕೊಳ್ಳದಂತೆ ಪ್ರತಿನಿತ್ಯವೂ ಸ್ವಚ್ಚತೆ ಮಾಡುವಂತೆ ಶಾಸಕ ಸಿ.ಎಸ್.ಪುಟ್ಟರಾಜು ಅವರು ಪುರಸಭೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪಟ್ಟಣದ ಶ್ರೀರಂಗಪಟ್ಟಣ-ಜೇವರ್ಗಿ ಹೆದ್ದಾರಿ ಮುಖ್ಯರಸ್ತೆಯ ಇಕ್ಕೆಲಗಳಲ್ಲಿರುವ ಚರಂಡಿಯಲ್ಲಿ ನೀರು ಕಟ್ಟಿಕೊಂಡು ಗಬ್ಬು ನಾರುತ್ತಿದೆ. ಜತೆಗೆ ಮಲೀನ ನೀರು ಶೌಚಾಲಯದ ಮೂಲಕ ಮನೆಯೊಳಗೆ ನುಗ್ಗುತ್ತಿದೆ ಎಂದು ಪಟ್ಟಣ ನಿವಾಸಿಗಳು ಶಾಸಕರಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಅವರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ ನಂತರ ಪುರಸಭೆ ಅಧಿಕಾರಿಗಳಿಗೆ ಸ್ವಚ್ಚತೆ ಬಗ್ಗೆ ಗಮನ ಹರಿಸುವಂತೆ ಸೂಚಿಸಿದರು.

ಚರಂಡಿಯ ನೀರು ಕಟ್ಟಿಕೊಂಡು ಗಬ್ಬು ನಾರುತ್ತಿದ್ದರು ಈವರೆಗೂ ಚರಂಡಿ ಸ್ವಚ್ಚಗೊಳಿಸಿಲ್ಲವೇಕೆ ಎಂದು ಪುರಸಭೆ ಅಧಿಕಾರಿಗಳು ಮತ್ತು ವಾರ್ಡಿನ ಸದಸ್ಯ ಇಮ್ರಾನ್ ಅವರಿಗೆ ಪ್ರಶ್ನೆ ಮಾಡಿದರು. ಚರಂಡಿ ಬ್ಲಾಕ್ ಆಗಿದ್ದು, ನೀರು ಸಲೀಸ್ಸಾಗಿ ಹರಿಯಲು ಸಾಧ್ಯವಾಗುತ್ತಿಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೇರಿದ ಚರಂಡಿಯಾಗಿದೆ. ಹೀಗಾಗಿ ಪುರಸಭೆ ಅನುದಾನದಲ್ಲಿ ಚರಂಡಿ ದುರಸ್ತಿ ಮಾಡಲು ಸಾಧ್ಯವಾಗಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದರು.

ಸ್ಥಳದಲ್ಲಿದ್ದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಎಇಇ ಪರಮೇಶ್‌ಗೌಡ ಮತ್ತು ರಾಜೇಗೌಡ ಈಗಾಗಲೇ ಮೂರು ಕೋಟಿ ವೆಚ್ಚದಲ್ಲಿ ಪ್ರಾಧಿಕಾರದಿಂದ ಚರಂಡಿ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ. ನಿರ್ಮಾಣದ ನಂತರ ಚರಂಡಿಯನ್ನು ಪುರಸಭೆಗೆ ಹಸ್ತಾಂತರಿಸಲಾಗುವುದು. ಅಲ್ಲಿಯವರೆಗೆ ಚರಂಡಿ ಸ್ವಚ್ಚತೆ ಕಾಪಾಡಿಕೊಳ್ಳುವಂತೆ ಪುರಸಭೆ ಅಧಿಕಾರಿಗಳಿಗೆ ತಿಳಿಸುವಂತೆ ಶಾಸಕರಿಗೆ ಮನವಿ ಮಾಡಿದರು.

ವಿಶ್ವನಾಥ್ ಚಾಮರಾಜನಗರ ವರದಿಗಾರ

ಕಾಯಕಯೋಗಿ ದಿನಪತ್ರಿಕೆಯ ಚಾಮರಾಜನಗರ ಜಿಲ್ಲಾ ವರದಿಗಾರರಾಗಿ ಬಿ.ಆರ್.ವಿಶ್ವನಾಥ್ ಅವರನ್ನು ನೇಮಕಗೊಳಿಸಲಾಗಿದೆ. ನಮ್ಮೆಲ್ಲಾ ಓದುಗರು, ಅಧಿಕಾರಿವರ್ಗ, ಜನಪ್ರತಿನಿಧಿಗಳು, ಸಂಘ ಸಂಸ್ಥೆ ಮುಖಂಡರು, ಸುದ್ದಿ ಹಾಗೂ ಜಾಹೀರಾತುಗಳಿಗೆ ವಿಶ್ವನಾಥ್ ಅವರನ್ನು ಸಂಪರ್ಕಿಸಲು ಕೋರಲಾಗಿದೆ.

ವಿಶ್ವನಾಥ್ ಬಿ.ಆರ್.
ಮೊ : 9986638679 –ಸಂಪಾದಕಿ.

Published and Owned by : Smt ARUNA JYOTHI.B.K. From No. 292, Basaveshwara Nilaya, Basaveshwara Maarga,Kaveri Nagar, Mandya Printed by : PUTTASWAMY,9th Cross, Vinoba Road,Subash Nagar, Mandya-571401, Mandya Dist. Karnataka. Editor : ARUNA JYOTHI.B.K.